ಕರ್ನಾಟಕ ವಿಶ್ವವಿದ್ಯಾಲಯ

KARNATAK UNIVERSITY

*NAAC Accredited with "A" Grade 2022*

ತಂತಿ: "ಯುನಿಕರ್ನಾಟಕ"

Tel: "UNIKARNATAK"

ಉದ್ಯಾನ ವಿಭಾಗ

DEPARTMENT OF HORTICULTURE

ಪಾವಟೆನಗರ,ಧಾರವಾಡ – ೫೮೦ ೦೦೩

PAVATE NAGAR,DHARWAD-580 003

ಅ.ಸಂ/ KU/Hort/2023-24/18

ದಿನಾಂಕ/ Date ; 16-5-23

## ಸುತ್ತೋಲೆ

| ಅ. ನಂ | ಮಾಲಿನ ವಿವರಣೆ | 2023-24 ನೇ ಸಾಲಿಗೆ ನಿಗದಿ ಪಡಿಸಿದ ಬೆಲೆ |
|---|---|---|
| 1 | ಕುಂಡೆ ಠೇವಣಿ ಒಂದಕ್ಕೆ | ಇರುವದಿಲ್ಲಾ |
| 2 | ಪ್ರತಿ ಕುಂಡಲೆ ಬಾಡಿಗೆ ಪ್ರತಿ ದಿನಕ್ಕೆ | 30=00 |
| 3 | ಟೆಂಡರ ಫಾರ್ಮ – ಹಣ್ಣುಗಳು(ಹುಣಸೆ, ಮಾವು, ಪೇರಲ, ಚಿಕ್ಕು, ತೆಂಗು ಇತ್ಯಾದಿ) | 500=00 + ಟ್ಯಾಕ್ಸ |
| 4 | ಟೆಂಡರ ಫಾರ್ಮ ಕಟ್ಟಿಗೆ ವಿಲೇವಾರಿ ಮಾಡುವದಕ್ಕೆ | 3000=00 + ಟ್ಯಾಕ್ಸ |

1. ಕುಂಡಲೆಗಳನ್ನು ಬದಲಿಸುವದಾಗಲಿ, ಹಾಳು ಮಾಡುವದಾಗಲಿ ಕಂಡು ಬಂದಲ್ಲಿ ಪ್ರತಿ ಕುಂಡಲೆಗೆ ರೂ.300=00 ದಂಡ ಆಕರಣೆ ಮಾಡಲಾಗುವದು.
2. ಹೂ ಕುಂಡಲೆಗಳನ್ನು ಕಡಿಮೆ ಅಂದರು 20 ಕ್ಕು ಹೆಚ್ಚು ಕುಂಡಲೆಗಳನ್ನು ಬಾಡಿಗೆ ತೆಗೆದುಕೊಂಡಲ್ಲಿ ಮಾತ್ರ ಉದ್ಯಾನ ವಿಭಾಗದ ಟ್ರ್ಯಾಕ್ಟರ ಉಪಯೋಗಿಸಿ ಕುಂಡಲೆಗಳನ್ನು ಇಡಲಾಗುವದು. 20 ಕ್ಕಿಂತ ಕಡಿಮೆ ಕುಂಡಲೆಗಳು ಬೇಕಾದಲ್ಲಿ ತಾವೇ ತೆಗೆದುಕೊಂಡು ಹೋಗಬೇಕು ಮತ್ತು ತಾವೇ ಮರಳಿ ತಂದು ಇಡಬೇಕು. ಕವಿವಿ ಆವರಣ ಮತ್ತು ಅದರ ಅಂಗ ಸಂಸ್ಥೆಗಳನ್ನು ಬಿಟ್ಟು ಹೊರಗಡೆ ಕುಂಡಲುಗಳಿಗೆ ಬೇಡಿಕೆ ಬಂದಲ್ಲಿ ಆಡಳಿತಾಧಿಕಾರಿಗಳ ಒಪ್ಪಿಗೆ ಪಡೆದು ಅವರು ನಿಗದಿಪಡಿಸುವ ಬೆಲೆಗೆ ಕುಂಡಲೆಗಳನ್ನು ಇಡಲಾಗುವದು.
3. ಕುಂಡಲೆಗಳ ಬೇಡಿಕೆಯನ್ನು ಎರಡು ದಿನ ಮುಂಚಿತವಾಗಿ ಉದ್ಯಾನ ವಿಭಾಗದ ಸೀಲು ಇರುವ ಚಲನ ಪಡೆದು ಬ್ಯಾಂಕಿನಲ್ಲಿ ಹಣ ಕಟ್ಟಬೇಕು. ತದನಂತರ ಬ್ಯಾಂಕಿನಿಂದ ಪಡೆದ ಚಲನ ಪ್ರತಿ ಮತ್ತು ಕುಂಡಲೆಗಳನ್ನು ಸುರಕ್ಷಿತವಾಗಿ ಮರಳಿಸುತ್ತೇವೆ ಮತ್ತು ಕುಂಡಲುಗಳಿಗೆ ಏನಾದರು ಹನಿ ಮಾಡಿದಲ್ಲಿ ಪ್ರತಿ ಕುಂಡಲಕ್ಕೆ ರೂ. 300=00 ದಂಡ ಕಟ್ಟುತ್ತೇವೆ ಎಂಬ ಒಪ್ಪಿಗೆ ಪತ್ರವನ್ನು ಉದ್ಯಾನ ವಿಭಾಗಕ್ಕೆ ಸಲ್ಲಿಸಿದ ನಂತರ ಕುಂಡಲೆಗಳನ್ನು ಇಡಲಾಗುವದು. ನಮ್ಮ ವಿಭಾಗದಲ್ಲಿ ನಗದು ಹಣ ಸ್ವೀಕರಿಸುವದಿಲ್ಲಾ. ಬ್ಯಾಂಕ ರಜೆ ಇದ್ದ ಪಕ್ಷದಲ್ಲಿ ಮಾತ್ರ ನಗದು ಸ್ವೀಕರಿಸಲಾಗುವದು.
4. ಒಮ್ಮೆ ಚಲನ ಮೂಲಕ ಕುಂಡಲೆಗಳ ಬಾಡಿಗೆ, ಟೆಂಡರ ಫಾರ್ಮ ಫೀ ಹಣವನ್ನು ಬ್ಯಾಂಕಿಗೆ ಸಂದಾಯಮಾಡಿದ ಹಣವನ್ನು ಯಾವುದೇ ಕಾರಣಕ್ಕೆ ಮರಳಿ ನೀಡಲಾಗುವದಿಲ್ಲಾ.
5. ನರ್ಸರಿಯಲ್ಲಿ ಲಭ್ಯವಿರುವ ಕುಂಡಲೆಗಳನ್ನು ಮಾತ್ರ ಇಡಲಾಗುವದು ಮತ್ತು ತಾವು ಕೇಳಿದ ಕುಂಡಲೆಗಳನ್ನು ಇಡಲಾಗುವದಿಲ್ಲಾ.
6. ಮುಂಚಿತವಾಗಿ ಹಣ ಕಟ್ಟದಿದ್ದರೆ ಯಾವುದೇ ಕಾರಣಕ್ಕೆ ಕುಂಡಲೆಗಳನ್ನು ಇಡಲಾಗುವದಿಲ್ಲಾ ಮತ್ತು ಟೆಂಡರ ಫಾರ್ಮ ನೀಡಲಾಗುವದಿಲ್ಲಾ.
7. ವಿಶ್ವವಿದ್ಯಾಲಯದಿಂದ ಹಣಕಾಸಿನ ನೆರವು ಪಡೆದು ಜಯಂತಿಗಳನ್ನು ಆಚರಿಸುವ ಸಂದರ್ಭದಲ್ಲಿ ಕಡ್ಡಾಯವಾಗಿ ಕುಂಡಲೆಗಳ ಬಾಡಿಗೆ ಹಣ ಕಟ್ಟಬೇಕು. ಕುಲಸಚಿವರ ಸಚಿವಾಲಯದಿಂದ (ಜಿಎಡಿ ಮತ್ತು ಪ್ರಸಾರಾಂಗ, ಕನೋಕೇಶನ) ನಡೆಯುವ ಸಭೆ ಸಮಾರಂಭಗಳನ್ನು ಹೊರತು ಪಡಿಸಿ ಉಳಿದ ಕಾರ್ಯಕ್ರಮಗಳಿಗೆ ಹೂ ಕುಂಡಲೆಗಳು ಬೇಕಾದಲ್ಲಿ ಕಡ್ಡಾಯವಾಗಿ ಹಣ ಸಂದಾಯ ಮಾಡಬೇಕು.

I/c ಕುಲಸಚಿವರು
16.05.2023

Scanned with OKEN Scanner